ಓ.ಎಸ್ ನಂ.214/2015

ಪಿಡಬ್ಲ್ಯೂ-1

**ಸಾಕ್ಷಿಯನ್ನು ದಿಃ 14.08.2019 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎ.ಆರ್.ಆರ್. ವಕೀಲರಿಂದ.**

ನನ್ನ ಪತಿಯ ತಂದೆಯ ಹೆಸರು ಯಾಮಯ್ಯ. ಅವರಿಗೆ ದೊಡ್ಡತಮ್ಮಯ್ಯ ಹಾಗೂ ನನ್ನ ಪತಿ ರಾಮಚಂದ್ರಯ್ಯ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ವಿವಾಹ ಆಗುವ ಮೊದಲೇ ನನ್ನ ಪತಿ ಹಾಗೂ ಅವರ ಸಹೋದರರ ನಡುವೆ ವಿಭಾಗ ಆಗಿತ್ತು. ಈ ಸಂಬಂಧ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ದೊಡ್ಡತಮ್ಮಯ್ಯನವರ ಹೆಂಡತಿ ಹಾಗೂ ಮಕ್ಕಳ ವಿರುದ್ಧ ಘೋಷಣಾತ್ಮಕ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವಾಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದು ವಜಾ ಆಗಿದ್ದು ಆ ಆದೇಶದ ಮೇಲೆ ಸಲ್ಲಿಸಿದ ಮೇಲ್ಮನವಿ ಸಹ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ವಿವಾದಿತ ಸ್ವತ್ತು ನನ್ನ ಪತಿಯ ಮೇಲೆ ಹೂಡಿದ್ದ ಜೀವನಾಂಶ ಪ್ರಕರಣದ ರಾಜಿ ಡಿಕ್ರಿಯಂತೆ ನನಗೆ ಬಂದಿತ್ತು ಎಂದು ತಿಳಿಸಿದೆ ಎಂದರೆ ಸರಿ.

2. ಸರ್ವೆ ನಂ.10ರಲ್ಲಿ ಒಟ್ಟು ಎಷ್ಟು ಜಮೀನು ಇದೆ ಎಂದು ನನಗೆ ತಿಳಿದಿಲ್ಲ. ಸದರಿ ಸರ್ವೆ ನಂ.10 ಯಾವಾಗ ಪೋಡಾಯಿತು ಎಂದು ನನಗೆ ತಿಳಿದಿಲ್ಲ. ಸದರಿ ಸರ್ವೆ ನಂ.10/6ರ ಸುತ್ತಮುತ್ತ ಮನೆಗಳಾಗಿದ್ದು ಈಗ ಅದು ಗ್ರಾಮ ಠಾಣಾ ವ್ಯಾಪ್ತಿಗೆ ಒಳಪಟ್ಟಿದ್ದು ವ್ಯವಸಾಯದ ಜಮೀನಾಗಿ ಉಳಿದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಅಲ್ಲಿ ನಾನು ಹೂವಿನ ಗಿಡ ಹಾಗೂ ತರಕಾರಿ ಗಿಡ ಹಾಕಿರುತ್ತೇನೆ. ದಾವಾಸ್ವತ್ತಿನ ಪಶ್ಚಿಮಕ್ಕೆ ಇರುವ ಲೇಃ ಅಂಕಯ್ಯನವರ ಮನೆಯನ್ನು ನನ್ನ ವಿವಾಹದ ಪೂರ್ವದಲ್ಲೇ ಕಟ್ಟಿದ್ದರು. ಪೂರ್ವಕ್ಕಿರುವ ಓಣಿ, ಉತ್ತರಕ್ಕೆ ಇರುವ ರಸ್ತೆಯು ಸಹ ನನ್ನ ವಿವಾಹ ಮುನ್ನಾ ಕಾಲದಿಂದಲೂ ಇದೆ ಎಂದರೆ ಸರಿ.

3. ನಿ.ಪಿ.6ರಲ್ಲಿ ನಮೂದಾಗಿರುವ ಯಾಮಯ್ಯನವರ ಕಿರಿಯ ಮಗ ರಾಮಚಂದ್ರ ಎಂದರೆ ನನ್ನ ಪತಿ. ಸದರಿ ನಿ.ಪಿ.6ರಂತೆ ಕಾನೇಶುಮಾರಿ ಸಂಖ್ಯೆಃ86 ಪೈಕಿ ಪೂರ್ವ ಪಶ್ಚಿಮಃ15 ಗಜ, ಉತ್ತರ-ದಕ್ಷಿಣಃ25 ಗಜ ಉಳ್ಳ ನಿವೇಶನಕ್ಕೆ ಚಕ್ಕುಬಂದಿ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆಃರಾಮಚಂದ್ರರವರ ಸ್ವಂತಕ್ಕೆ

ಉಳಿದಿರುವ ನಿವೇಶನ, ಪಶ್ಚಿಮಕ್ಕೆಃಅಂಕಯ್ಯನವರ ಮನೆ, ಉತ್ತರಕ್ಕೆಃಪಿಡಬ್ಲ್ಯೂಡಿ ರಸ್ತೆ ಈ ಮಧ್ಯೆ ಇರುವ ನಿವೇಶನವನ್ನು ದಿಃ27.04.1981ರಲ್ಲಿ 1ನೇಪ್ರತಿವಾದಿಯ ಪತಿಗೆ ನನ್ನ ಪತಿ ರಾಮಚಂದ್ರಯ್ಯನವರು ಕ್ರಯಮಾಡಿರುತ್ತಾರೆ ಎಂದರೆ ಸರಿಯಲ್ಲ, ನಿ.ಪಿ.6ನ್ನು ಯಾರು ನ್ಯಾಯಾಲಯಕ್ಕೆ ಸಲ್ಲಿಸಿದ್ದರು ಎಂದು ನನಗೆ ತಿಳಿದಿಲ್ಲ, ಸದರಿ ಕ್ರಯವನ್ನು ಪ್ರಶ್ನಿಸಿ ನಾನು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ, ಓ.ಎಸ್.90/2014ರ ದಾವೆಯಲ್ಲಿ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಓ.ಎಸ್.90/2014ರ ದಾವೆಯನ್ನು ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಹೂಡಿದ್ದು ಸದರಿ ದಾವೆಯ ಡಿಕ್ರಿ ಪ್ರತಿವಾದಿಗಳಿಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿದಾರರು ಮುಂದುವರೆದು ನನ್ನ ತಂದೆಯ ಸ್ವತ್ತನ್ನು ವಿಭಾಗಮಾಡಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ.

4. ನನ್ನ ತಂದೆಯವರಿಗೆ ಕೆಂಚನಹಳ್ಳಿಯಲ್ಲಿ ಸಾಕಷ್ಟು ಆಸ್ತಿ ಇತ್ತು ಎಂದರೆ ಸರಿಯಲ್ಲ, ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ, ನಿ.ಪಿ.6ರ ಕ್ರಯಪತ್ರದಂತೆ ಸದರಿ ಕಾನೇಶುಮಾರಿ ಸಂಖ್ಯೆಃ86ರ ಪೈಕಿ ಮಾರಾಟ ಮಾಡಿದ ನಿವೇಶನವು 1ನೇ ಪ್ರತಿವಾದಿಯ ಪತಿಯ ಹೆಸರಿಗೆ ವರ್ಗಾವಣೆಯಾಗಿ ಇಸಿ ಪ್ರಮಾಣಪತ್ರದಲ್ಲಿ ನಮೂದಾಗಿದೆ ಎಂದರೆ ನನಗೆ ತಿಳಿದಿಲ್ಲ, ನಿ.ಪಿ.2ರ ಡಿಕ್ರಿಯಲ್ಲಿ ಐಟಂ ನಂ.2ರ ಸ್ವತ್ತಿನಲ್ಲಿ ಮನೆ ಇದೆ ಎಂದು ತಿಳಿಸಲಾಗಿಲ್ಲ ಎಂದರೆ ನನಗೆ ತಿಳಿದಿಲ್ಲ, ದಾವಾಸ್ವತ್ತಿನಲ್ಲಿ ಇದೆ ಎಂದು ಹೇಳಲಾದ ಮನೆಯು ಸುಮಾರು 30 ವರ್ಷಗಳ ಹಿಂದೆ ಕಟ್ಟಲಾಗಿರುತ್ತದೆ ಎಂದರೆ ಸರಿ. ನನ್ನ ತಂದೆಯೇ ಸದರಿ ಮನೆಯನ್ನು ಕಟ್ಟಿರುತ್ತಾರೆ. ಈ ವಿಷಯವನ್ನು ನನ್ನ ವಾದಪತ್ರದಲ್ಲಿ ತಿಳಿಸಿರುತ್ತೇನೆ. ನನ್ನ ತಂದೆಯ ಹೆಸರಿಗೆ ಸದರಿ ಸ್ವತ್ತು ಇದ್ದ ಬಗ್ಗೆ ದಾಖಲೆಗಳನ್ನು ನ್ಯಾಯೊಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಸ್ವತ್ತು ನನ್ನ ತಂದೆಯ ಹೆಸರಿಗೆ ಯಾವುದೇ ದಾಖಲೆಗಳು ಇರಲಿಲ್ಲ ಎಂದರೆ ಸರಿಯಲ್ಲ, ಮನೆ ಕಟ್ಟುವ ಸಂಬಂಧ ಪಡೆದುಕೊಳ್ಳುವ ಕಟ್ಟಡ ಪರವಾನಗಿ ಇತರೆ ದಾಖಲೆಗಳು ಸಹ ಇರುವುದಿಲ್ಲ, ಸದರಿ ಮನೆಯು 45)(35 ವಿಸ್ತೀರ್ಣವನ್ನು ಹೊಂದಿರುತ್ತದೆ. ನನ್ನ ತಂದೆ ಕಟ್ಟಿರುವ ಮನೆ ಇರುವ ಸ್ವತ್ತು ಹಾಗೂ ಕಾನೇಶುಮಾರಿ ಸಂಖ್ಯೆಃ86ರ ಸ್ವತ್ತುಗಳ ದಾಖಲೆಗಳನ್ನು ನಾನು ಸಂಬಂಧಿಸಿದ ಕಛೇರಿಯಿಂದ ಪಡೆದು ಪರಿಶೀಲಿಸಿರುವುದಿಲ್ಲ, ನನ್ನ ತಂದೆಯ ಹೆಸರಿಗೆ ಯಾವುದೇ ಕಾನೇಶುಮಾರಿ ಸಂಖ್ಯೆಯನ್ನು ಒಳಗೊಂಡ ಸ್ವತ್ತು ಇರಲಿಲ್ಲ ಹಾಗೂ ಯಾವುದೇ

ಮನೆಯನ್ನು ಅವರು ಕಟ್ಟಿರುವುದಿಲ್ಲ ಆದ್ದರಿಂದ ನಾನು ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಪತಿಯ ಹೆಸರಿನಲ್ಲಿರುವ ಪರವಾನಗೆ, ಟ್ಯಾಕ್ಸ್‌ಡಿಮ್ಯಾಂಡ್ ಎಕ್ಸ್‌ಟ್ರ್ಯಾಕ್ಟ್ ಹಾಗೂ ಖಾತಾ ಎಕ್ಸ್‌ಟ್ರ್ಯಾಕ್ಟ್‌ಗಳನ್ನು ಪ್ರಶ್ನಿಸಿ ಅಥವಾ ರದ್ದುಪಡಿಸಲು ಯಾವುದೇ ಪ್ರಯತ್ನ ಮಾಡಲಾಗಿದೆಯೇ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು 1ನೇ ಪ್ರತಿವಾದಿಯ ಪತಿಯ ಹೆಸರಿಗೆ ಯಾವುದೇ ದಾಖಲೆಗಳು ಆಗಿಲ್ಲ ಎಂದು ನುಡಿದಿರುತ್ತಾರೆ.

5. ನಿ.ಪಿ.6ರಂತೆ ನಿವೇಶನವನ್ನು ಖರೀದಿಸಿದ ನಂತರ ದಿಃ29.01.1992ರಲ್ಲಿ 1ನೇ ಪ್ರತಿವಾದಿಯ ಪತಿ ಶಿವರಾಮಯ್ಯನವರು ಪಂಚಾಯಿತಿಯಿಂದ ಪರವಾನಗೆ ಪಡೆದು ಮನೆ ನಿರ್ಮಿಸಿಕೊಂಡು ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನಾಗಲೀ ನನ್ನ ಸಹೋದರ ಸಹೋದರಿಯರಾಗಲೀ ಅಥವಾ ನನ್ನ ತಂದೆಯಾಗಲೀ ಸದರಿ ಸ್ವತ್ತಿನಲ್ಲಿ ಯಾವುದೇ ಕಾಲಕ್ಕೂ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

6. ದಾವಾಸ್ವತ್ತಿನಲ್ಲಿರುವ ಮನೆಗೆ ಒಳಗೊಂಡಂತೆ ಒಟ್ಟಾಗಿ ಕಂದಾಯ ಕಟ್ಟುತ್ತಿರುತ್ತೇನೆ. ಮನೆಗೆ ಪ್ರತ್ಯೇಕವಾಗಿ ಕಂದಾಯ ಕಟ್ಟಿರುವುದಿಲ್ಲ. ದಾವಾಸ್ವತ್ತು ತಾವರೆಕೆರೆ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ದಾವಾಸ್ವತ್ತನ್ನು ಇದುವರೆವಿಗೂ ಅಳತೆ ಮಾಡಿಸಿರುವುದಿಲ್ಲ. ಗ್ರಾಮಪಂಚಾಯಿತಿ ವತಿಯಿಂದ ತಾಲ್ಲೂಕು ಸರ್ವೇಯರ್ ಮೂಲಕ ದಾವಾಸ್ವತ್ತನ್ನು ಅಳತೆಮಾಡಿ ಸದರಿ ಸ್ವತ್ತಿನ 3ಗುಂಟೆ ಸ್ವತ್ತು 2ನೇ ಪ್ರತಿವಾದಿಯ ಸ್ವಾಧೀನದಲ್ಲಿದ್ದು ಅಲ್ಲಿ 36)(41 ಅಡಿಯ ಹೆಂಚಿನ ಮನೆ ಇರುತ್ತದೆ ಎಂದು ವರದಿ ನೀಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಈ ಎಲ್ಲಾ ವಿಚಾರಗಳು ತಿಳಿದಿದ್ದರೂ ಪ್ರತಿವಾದಿಗಳಿಂದ ಅಕ್ರಮವಾಗಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ಸಾಕ್ಷಿದಾರರಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಾಣುತ್ತಿರುವ ಮನೆಯೇ ದಾವಾಸ್ವತ್ತಿನಲ್ಲಿ ಇದೆ ಎಂದು ಹೇಳಲಾಗುವ ಮನೆ ಎಂದರೆ ಸರಿ ಎಂದು ಒಪ್ಪಿಕೊಂಡ ಮೇರೆಗೆ ಸದರಿ ಎರಡು ಫೋಟೋಗಳನ್ನು ನಿ.ಡಿ.1 ಮತ್ತು ನಿ.ಡಿ.2 ಎಂದು ಗುರುತಿಸಲಾಯಿತು. 1ನೇ

ಪ್ರತಿವಾದಿಯ ಪತಿ 2011ರಲ್ಲಿ ಮರಣ ಹೊಂದಿದರು ಎಂದರೆ ಯಾವ ವರ್ಷವೆಂದು ನನಗೆ ನೆನಪಿಲ್ಲ. ಅಂದಿನಿಂದಲೂ ಪ್ರತಿವಾದಿಗಳು ಸದರಿ ಮನೆಯ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.